## ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

### ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ


# ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ-576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

## ಹವಾಮಾನ ಮುನ್ಸೂಚನೆಯ ಅವಧಿ 12.07.2025 ರಿಂದ 16.07.2025

ಸಂ. ಗ್ರಾ.ಕೃ.ಹ.ಸೇ.ಬ/54/2025 ದಿನಾಂಕ: 11.07.2025

ಭಾರತೀಯ ಹವಾಮಾನ ಇಲಾಖೆ, ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ

### ಕಳೆದ ವಾರದ ಪರಿಸ್ಥಿತಿ (ದಿನಾಂಕ: 07.07.2025 ರಿಂದ 11.07.2025 ರವರೆಗೆ)

| ಹವಾಮಾನದ ಅಂಶಗಳು | ದಿನ-1 (07.07.2025) | ದಿನ-2 (08.07.2025) | ದಿನ-3 (09.07.2025) | ದಿನ-4 (10.07.2025) | ದಿನ-5 (11.07.2025) |
|---|---|---|---|---|---|
| ಮಳೆ (ಮಿ.ಮೀ.) | 25.7 | 11.4 | 2.7 | 43 | 67.2 |
| ಗರಿಷ್ಠ ಉಷ್ಣಾಂಶ (ಡಿ.ಸೆ.) | 29 | 29.6 | 30.6 | 30.9 | 29 |
| ಕನಿಷ್ಠ ಉಷ್ಣಾಂಶ (ಡಿ.ಸೆ.) | 22.1 | 23.6 | 23.7 | 23.2 | 22.4 |
| ಸ್ಥಳೀಯ ಮೋಡಗಳ ಹೊದಿಕ (ಒಕ್ಟಾ) | 6 | 4 | 8 | 6 | 5 |
| ಗರಿಷ್ಠ ಆರ್ದ್ರತೆ (ಶೇ.) | 94 | 92 | 92 | 89 | 90 |
| ಕನಿಷ್ಠ ಆರ್ದ್ರತೆ (ಶೇ.) | 85 | 74 | 78 | 87 | 85 |
| ಗಾಳಿಯ ವೇಗ (ಕಿ.ಮೀ./ಗಂಟೆಗೆ) | 5 | 6 | 8 | 5.5 | 6.3 |

12.07.2025 ರಿಂದ 16.07.2025 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | |
|---|---|---|---|---|---|
| | ದಿನ-1 (12.07.2025) | ದಿನ-2 (13.07.2025 ) | ದಿನ-3 (14.07.2025 ) | ದಿನ-4 (15.07.2025) | ದಿನ-5 (16.07.2025 ) |
| ಮಳೆ ಪ್ರಮಾಣ (ಮಿ.ಮೀ.) | 35 | 35 | 45 | 50 | 50 |
| ಗರಿಷ್ಠ ಉಷ್ಣಾಂಶ (°C) | 29 | 29 | 29 | 29 | 29 |
| ಕನಿಷ್ಠ ಉಷ್ಣಾಂಶ (°C) | 22 | 22 | 22 | 22 | 22 |
| ಮೋಡದ ಹೊದಿಕೆ (ಒಕ್ಟಾ) | 6 | 5 | 7 | 7 | 7 |
| ಗರಿಷ್ಠ ಆರ್ದ್ರತೆ (ಶೇ.) | 96 | 95 | 95 | 95 | 96 |
| ಕನಿಷ್ಠ ಆರ್ದ್ರತೆ (ಶೇ.) | 76 | 75 | 75 | 80 | 79 |
| ಗಾಳಿಯ ವೇಗ (Kmph) | 6 | 8 | 6 | 6 | 6 |
| ಗಾಳಿಯ ದಿಕ್ಕು (°) | 259 | 360 | 243 | 231 | 188 |
| ಮುನ್ಸೂಚನೆ | R+ | R+ | R+ | R+ | R+ |
| ಸಂಭವನೀಯತೆ (%) | 75-100% | 75-100% | 75-100% | 75-100% | 75-100% |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 16.07.2025 ರಿಂದ 22.07.2025 ರವರೆಗೆ ವಾಡಿಕೆ ಮಳೆಯಾಗುವ ಸಂಭವವಿದೆ.**

### ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಸಾಧಾರಣ ಮಳೆಯಿಂದ ಹೆಚ್ಚು ಮಳೆಯಾಗುವ ಸಂಭವವಿದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **29.0°C – 29.0°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **22.0°C -22.0°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **95%** ರಿಂದ **96%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **75%** ರಿಂದ **80%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **06–08** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.



**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**ರೈತರು ತಮ್ಮ ಹಳ್ಳಿಯ ಅಥವಾ ಪಂಚಾಯತಿಯ ಹವಾಮಾಣ ಮುನ್ಸೂಚನೆ ತಿಳಿದುಕೊಳ್ಳಲು "ಮೌಸಮ್ ಗ್ರಾಮ" ಎಂಬ ವೆಬ್‌ಸೈಟ್ ಬಳಸಿಕೊಳ್ಳಬಹುದಾಗಿದೆ (ಹರ್ ಗರ್ ಮೌಸಮ್)**

**Decadal Rainfall (mm) Comparison:**

| Year | 30 years Mean | 2014 | 2015 | 2016 | 2017 | 2018 | 2019 | 2020 | 2021 | 2022 | 2023 | 2024 | 2025 |
|---|---|---|---|---|---|---|---|---|---|---|---|---|---|
| Rainfall | 3710.5 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3879.9 | 3316.6 | 3875.4 | 2319.8 |
| Rainy days | 105 | 112 | 107 | 119 | 121 | 112 | 123 | 126 | 152 | 125 | 105 | 135 | 59 |

| Realised Rainfall (03rd JULY to 09th JULY, 2025) | Rainfall Forecast Map (11th JULY to 17th JULY 2025) | Temperature conditional Index Outlook (19.03.2025 to 25.03.2025) | Normalized Difference Vegetation Index |
|---|---|---|---|
|  |  |  |  |

| Warnings for Costal Karnataka | |
|---|---|
| **Date of Issue: July 11, 2025** | |
| Day 1:July 11, 2025 | Heavy Rain |
| Day 2: July 12, 2025 | Heavy Rain |
| Day 3: July 13, 2025 | Heavy Rain |
| Day 4: July 14, 2025 | Heavy Rain |
| Day 5: July 15, 2025 | Heavy Rain |
| Day 6: July 16, 2025 | Heavy Rain |
| Day 7: July 17, 2025 | Heavy Rain |

## ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

**ಜಿಲ್ಲೆಯ 05 ತಾಲೂಕುಗಳಲ್ಲಿ ಮುಂದಿನ ಐದು ದಿನಗಳಲ್ಲಿ ಮೋಡ ಕವಿದ ವಾತಾವರಣದ ಜೊತೆಗೆ ಸಾಧಾರಣ ಮಳೆಯಿಂದ ಹೆಚ್ಚು ಮಳೆಯಾಗುವ ಸಂಭವವಿದೆ**

- ರೈತರು 1% ಬೋರ್ಡೋ ದ್ರಾವಣವನ್ನ ಸಿಂಪಡಿಸಲು ಉತ್ತಮ ಸಮಯವಾಗಿದೆ
- ರೈತರು ಎತ್ತರ ಪ್ರದೇಶದಲ್ಲಿ ಅಡಿಕೆ & ತೆಂಗು ಗಿಡ ನಾಟಿ ಮಾಡಲು ಸೂಕ್ತ ಸಮಯ.

### ತೋಟಗಾರಿಕೆ ಬೆಳೆಗಳು:

| ಬೆಳೆ | ಕೃಷಿ ಸಲಹೆಗಳು |
|---|---|
| ಅಡಿಕೆ (ಸಸಿ ನೆಡುವುದು) | ➢ ಎತ್ತರ ಪ್ರದೇಶದಲ್ಲಿ ಅಡಿಕೆ ಗಿಡ ನಾಟಿ ಮಾಡಲು ಸೂಕ್ತ ಸಮಯ. ಗಿಡದಿಂದ ಗಿಡಕ್ಕೆ '9 X 9' ಅಡಿ ಅಂತರದಲ್ಲಿ ನಾಟಿ ಮಾಡಬೇಕು.<br>➢ ಅಡಿಕೆ ತೋಟದಲ್ಲಿ ಎರಡು ಸಾಲುಗಳ ಮಧ್ಯದಲ್ಲಿ ತೋಟದ ನೀರು ಬಸಿದು ಹೋಗಲು 2 ಅಡಿ ಆಳದ ಕಾಲುವೆಗಳನ್ನು ತೆಗೆಯಬೇಕು.<br>➢ ಮಣ್ಣು ಪರೀಕ್ಷೆ ಶಿಫಾರಸ್ಸಿತ ಪ್ರಮಾಣದ ಸುಣ್ಣವನ್ನು ಮಣ್ಣಿನಲ್ಲಿ ಸೇರಿಸಬೇಕು.<br>➢ '2X2" ಅಡಿ ಗುಂಡಿಯಲ್ಲಿ ಮೇಲ್ಮಣ್ಣು ಮತ್ತು 20kg ಚೆನ್ನಾಗಿ ಕಳಿತ ಕಾಂಪೋಸ್ಟ್ ಗೊಬ್ಬರದಿಂದ ಗುಂಡಿಯನ್ನು ತುಂಬಿಸಿ ಗಿಡವನ್ನು ನೆಡಬೇಕು. |
| ಅಡಿಕೆ (ಸಾಮಾನ್ಯ ಸಲಹೆ) | ➢ ರೈತರು ಎರಡನೇ ಸುತ್ತಿನ ಶೇಕಡಾ. 1ರ ಬೋರ್ಡೋ ದ್ರಾವಣವನ್ನು ಸಿಂಪಡಿಸಲು ಸೂಕ್ತಸಮಯವಾಗಿದೆ. ಅದೇ ರೀತಿ ಈ ವಾತಾವರಣದಲ್ಲಿ ಎಲೆ ಚುಕ್ಕೆ ರೋಗವು ಉಲ್ಬಣಗೊಳ್ಳುವ ಸಾಧ್ಯತೆಯಿರುವುದರಿಂದ ರೈತರು ಶೇಕಡಾ.1ರ ಬೋರ್ಡೋ ದ್ರಾವಣವನ್ನು ಅಡಿಕೆ ಗರಿಗಳಿಗೆ ಸಿಂಪಡಿಸುವುದು ಸೂಕ್ತವಾಗಿದೆ. |
| ತೆಂಗು (ಸಸಿ ನೆಡುವುದು) | ➢ ಎತ್ತರ ಪ್ರದೇಶದಲ್ಲಿ ತೆಂಗು ಗಿಡ ನಾಟಿ ಮಾಡಲು ಸೂಕ್ತ ಸಮಯ. 2.5 – 3.0 ಅಡಿ ಉದ್ದ, ಅಗಲ ಮತ್ತು ಆಳದ ಗುಂಡಿಯನ್ನು ನಿರ್ಮಿಸಿ.<br>➢ ಅದಕ್ಕೆ ಹಟ್ಟಿ ಗೊಬ್ಬರ, ಮೇಲ್ಮಣ್ಣು ಹಾಗೂ 20 ಗ್ರಾಂ. ಫೋರೇಟ್ ಮಿಶ್ರಣವನ್ನು ಬೆರೆಸಿ.<br>➢ ಆಯ್ಕೆ ಮಾಡಿದ ಸಸಿಗಳನ್ನು ಗುಂಡಿಯ ಮಧ್ಯಭಾಗದಲ್ಲಿ ನಾಟಿ ಮಾಡಿ ಆಧಾರವನ್ನು ನೀಡಬೇಕು.<br>➢ ಹೆಚ್ಚು ಮಳೆ ಬೀಳುವ ಜಾಗದಲ್ಲಿ ಗಿಡಗಳ ಬುಡದಲ್ಲಿ ನೀರು ಶೇಖರಣೆಯಾಗದಂತೆ ನೋಡಿಕೊಳ್ಳಬೇಕು. |
| ತೆಂಗು (ರೈನೋಸೊರೆಸ್ ದುಂಬಿ) | ➢ ಹೊಂಡದಿಂದ ಗೊಬ್ಬರವನ್ನು ಎತ್ತಿದಾಗಲೆಲ್ಲಾ ಗೊಬ್ಬರದ ಹೊಂಡಗಳಿಂದ (ಕೀಟಗಳು ಸಂತಾನೋತ್ಪತ್ತಿ ಮಾಡುವ ಸ್ಥಳ) ಜೀರುಂಡೆಯ ವಿವಿಧ ಹಂತಗಳನ್ನು ಸಂಗ್ರಹಿಸಿ ನಾಶಮಾಡಿ<br>➢ ಕೀಟಗಳ ಶಾಶ್ವತೆಯನ್ನು ಪರೀಕ್ಷಿಸಲು ಗೊಬ್ಬರದ ಹೊಂಡಗಳಲ್ಲಿ ಎಂಟೋಮೊಪಾಥೋಜೆನ್ ಅಂದರೆ ಶಿಲೀಂದ್ರವನ್ನು |

| | |
|---|---|
| | (ಮೆಟಾರ್ಝಿಯಂ ಅನಿಸೊಪ್ಲಿಯಾ) ಸೇರಿಸುವುದು.<br>➢ ಪ್ರತಿ ಕಟಾವಿನಲ್ಲಿ ಮರದ ಸುಳಿಗಳನ್ನು ಪರೀಕ್ಷಿಸಿ ಮತ್ತು ದೊಡ್ಡ ಜೀರುಂಡೆಗಳನ್ನು ಹೊರತೆಗೆದು ಕೊಲ್ಲುವುದು.<br>➢ ಸುಳಿಯಲ್ಲಿರುವ ಎಲೆಗಳಲ್ಲಿ ಒಳಗಿನ ಮೂರು ಎಲೆಗಳ ತಳದಲ್ಲಿ ಪೋರೇಟ್ 10ಉ+ಮರಳು (1:2) ಪ್ರತಿ ಮರಕ್ಕೆ 150 ಗ್ರಾಂ ನಂತೆ ಸೇರಿಸುವುದು.<br>➢ ರಂಧ್ರಗಳಲ್ಲಿರುವ ಸಣ್ಣ ಚೀಲಗಳಲ್ಲಿ ಪೋರೇಟ್ 10ಉ. 5 ಗ್ರಾಂ ನ್ನು ಹಾಕಿ ಎರಡು ಒಳಗಿನ ಎಲೆಯ ಅಕ್ಷಗಳಲ್ಲಿ 6 ತಿಂಗಳ ಮಧ್ಯಂತರದಲ್ಲಿ 2 ಬಾರಿ ಇರಿಸುವುದು<br>➢ ಜೀರುಂಡೆಗಳನ್ನು ಬಲೆಗೆ ಬೀಳಿಸಲು ಮತ್ತು ಕೊಲ್ಲಲು ರೈನೋಲ್ಯೂರ್ ಫೆರೋಮೋನ್ ಬಲೆಯನ್ನು ಅರ್ಧ ಹೇಕ್ಟರ್‌ಗೆ ಅಳವಡಿಸುವುದು. |
| **ತೆಂಗು**<br>(ಕಾಂಡ ಸೋರುವ ರೋಗ) | ➢ ಕಾಂಡ ಸೋರುವ ರೋಗ ನಿಯಂತ್ರಣ ಮಾಡಲು ರೈತರು ಕಾಂಡ ಭಾಗವನ್ನು ಕೆತ್ತಿದ ನಂತರ ಶೇಕಡ 1ರ ಬೋರ್ಡೋ ಪೇಸ್ಟನ್ನು ಹಚ್ಚಬೇಕು ಅಥವಾ 2 ಮಿ.ಲೀ ಹೆಕ್ಸಾಕೊನಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಬುಡಕ್ಕೆ ಸುರಿಯುವುದು (ಪ್ರತಿ ಮರಕ್ಕೆ 3ಲೀಟರ್) ಅದರ ಜೊತೆಗೆ ಪ್ರತಿ ಗಿಡಕ್ಕೆ 5 ಕೆ.ಜಿಯಷ್ಟು ಬೇವಿನ ಹಿಂಡಿಯನ್ನು ನೀಡುವುದು. |
| **ಗೇರು**<br>(ಎಲೆಕೊಳೆ ರೋಗ) | ➢ ಈ ರೋಗವನ್ನು ನಿಯಂತ್ರಣ ಮಾಡಲು ಕಾಪರ್ ಆಕ್ಸಿ ಕ್ಲೋರೈಡ್ ಅನ್ನು ಪ್ರತಿ ಲೀಟರ್ ನೀರಿಗೆ 3 ಗ್ರಾಂನಷ್ಟು ಮಿಶ್ರಿಸಿ ಸಿಂಪಡಿಸುವುದು ಸೂಕ್ತ |
| **ಗೇರು**<br>(ಪೋಷಕಾಂಶ ನಿರ್ವಹಣೆ) | ➢ ರೈತರು ಶಿಫಾರಸ್ಸಿನ ಪ್ರಮಾಣದ ಗೊಬ್ಬರ ನೀಡುವ 15ದಿನಗಳ ಮೊದಲು ಪ್ರತಿ ಎಕರೆಗೆ 200 ಕೆ.ಜಿ ಕೃಷಿ ಸುಣ್ಣವನ್ನು ಹಾಕುವುದು ಸೂಕ್ತ<br>➢ ರೈತರು 60:60:60 ಗ್ರಾಂ, 125:125:125 ಗ್ರಾಂ, 250:125:125 ಗ್ರಾಂ, 500:125:125 ಗ್ರಾಂ ಹಾಗೂ 500:250:250 ಗ್ರಾಂ ನಷ್ಟು ಸಾರಜನಕ/ರಂಜಕ/ಪೊಟ್ಯಾಷ್ ಅನ್ನು 1ನೇ ವರ್ಷದ, 2ನೇ ವರ್ಷದ,3ನೇ ವರ್ಷದ,4 ರಿಂದ 8ನೇ ವರ್ಷದ ಮತ್ತು 9ನೇ ವರ್ಷದ ಮೇಲ್ಪಟ್ಟ ಗಿಡಗಳಿಗೆ ಹಾಕುವುದು ಸೂಕ್ತವಾಗಿದೆ. |
| **ಬಾಳೆ**<br>(ಎಲೆಚುಕ್ಕೆ ರೋಗ) | ➢ ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶ ಪಡಿಸುವುದು. ನಂತರ ಹತೋಟಿಗಾಗಿ ಹೆಕ್ಸಾಕೊನೊಜೋಲ್ 1ಮಿ.ಲೀ ಅಂತೆ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಿಸಿ |
| **ಮಲ್ಲಿಗೆ**<br>(ಎಲೆಚುಕ್ಕೆ ರೋಗ) | ➢ ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶ ಪಡಿಸುವುದು. ನಂತರ ಹತೋಟಿಗಾಗಿ ಹೆಕ್ಸಾಕೊನೊಜೋಲ್ 1ಮಿ.ಲೀ ಅಂತೆ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಿಸಿ |
| **ಮಲ್ಲಿಗೆ**<br>(ಸಾಮಾನ್ಯ ಸಲಹೆ) | ➢ ರೈತರು ಬೇಸಿಗೆಯಲ್ಲಿ ಗಿಡದ ಬುಡದಲ್ಲಿ ನೀರು ನಿಲ್ಲುವಂತೆ ಪಾತಿ ಮಾಡಿರುತ್ತಾರೆ. ಮಳೆಗಾಲದಲ್ಲಿ ಆ ಪಾತಿಯಲ್ಲಿ ನೀರು ನಿಲ್ಲದಂತೆ ಒಡೆದು ಕೊಡಬೇಕು, ಇಲ್ಲವಾದಲ್ಲಿ ಸೊರಗು ರೋಗ ಬರುವ ಸಂಭವವಿರುತ್ತದೆ. |
| **ತೋಟಗಾರಿಕೆ ಬೆಳೆಗಳು**<br>(ಸಾಮಾನ್ಯ ಸಲಹೆ) | ➢ ಮಳೆಗಾಲವಾಗಿರುವುದರಿಂದ ತೋಟಗಳಲ್ಲಿ ನೀರು ನಿಲ್ಲದಂತೆ ಸೂಕ್ತವಾದ ಮುಂಜಾಗ್ರತೆ ಕ್ರಮ ವಹಿಸಬೇಕು ಇಲ್ಲವಾದಲ್ಲಿ ಹಲವಾರು ರೋಗಗಳು ಬರುವ ಸಾಧ್ಯತೆಯಿರುತ್ತದೆ. |

## ಕ್ಷೇತ್ರ ಬೆಳೆಗಳು:

| | |
|---|---|
| **ಭತ್ತ**<br>(ನಾಟಿ ಸಮಯ) | ➢ ಭತ್ತ ನಾಟಿ ಮಾಡಲು ಸಮಯ ಸೂಕ್ತವಾಗಿದೆ. ಭತ್ತ ನಾಟಿ ಮಾಡುವ ಸಮಯದಲ್ಲಿ 17.5 ಕಿ. ಗ್ರಾಂ. ಯೂರಿಯಾ, 60 ಕಿ. ಗ್ರಾಂ. ಶಿಲಾರಂಜಕ 13.5 ಕಿ. ಗ್ರಾಂ. ಮ್ಯೂರಿಯೆಟ್ ಆಫ್ ಪೊಟ್ಯಾಷ್ ಮತ್ತು 12 ಕಿ.ಗ್ರಾಂ., ಮೆಗ್ನೇಶಿಯಂ ಸಲ್ಫೇಟ್ ಗೊಬ್ಬರಗಳನ್ನು ಪ್ರತಿ ಎಕರೆಗೆ ಕೊಡುವುದು.<br>➢ ಮಣ್ಣು ಪರೀಕ್ಷೆಯಾ ಆಧಾರದ ಪ್ರಕಾರ ಮೂರು ವರ್ಷಕ್ಕೆ ಒಂದು ಬಾರಿ 8 ಕಿ. ಗ್ರಾಂ. ಜಿಂಕ್ ಸಲ್ಫೇಟ್ ಮತ್ತು 1 ಕಿ.ಗ್ರಾಂ ಬೊರಾಕ್ಸ್ ಗೊಬ್ಬರಗಳನ್ನು ಪ್ರತಿ ಎಕರೆಗೆ ಕೊಡುವುದು. |
| **ಭತ್ತ**<br>(ಕಳೆ ನಿರ್ವಹಣೆ) | ➢ ಭತ್ತದಲ್ಲಿ ಉದಯ ಪೂರ್ವಕ ಕಳೆಗಳ ನಿರ್ವಹಣೆ ಮಾಡಲು, ಪೈರಾಜೋಸಲ್ಪುರಾನ್ ಈಥೈಲ್ 10WP 80g ಕಳೆನಾಶಕವನ್ನು 10 Kg ಮರಳಿನ ಜೊತೆಗೆ ಮಿಶ್ರಣ ಮಾಡಿ ಭತ್ತ ನಾಟಿ ಮಾಡಿದ 3–5 ದಿನಗಳ ಒಳಗೆ 1 ಎಕರೆ ಭತ್ತದ ಗದ್ದೆಯಲ್ಲಿ ಎರಚಬೇಕು.<br>➢ ಭತ್ತದಲ್ಲಿ ಉದಯ ಪೂರ್ವಕ ಕಳೆಗಳ ನಿರ್ವಹಣೆ ಮಾಡಲು, ಪೆಂಡಿಮಿಥಾಲಿನ್ 38.7ಸಿ.ಎಸ್ 3ಮಿ.ಲೀ. ಪ್ರತಿ ಲೀಟರ್ ನೀರಿಗೆ ಅಥವಾ ಮೆಟ್‌ಸಲ್ಪುರಾನ್ ಮಿಥೈಲ್ ಅಥವಾ ಕ್ಲೋರಿಮ್ಯುರಾನ್ ಈಥೈಲ್ 8 ಗ್ರಾಂ ಪುಡಿಯನ್ನು 100 ರಿಂದ 120ಲೀಟರ್ ನೀರಿನೊದಿಗೆ ಮಿಶ್ರಣ ಮಾಡಿ ಭತ್ತ ನಾಟಿ ಮಾಡಿದ 3–5 ದಿನಗಳ ಒಳಗೆ 1 ಎಕರೆ ಭತ್ತದ ಗದ್ದೆಯಲ್ಲಿ ಸಿಂಪಡಿಸಬೇಕು..<br>➢ ಭತ್ತದಲ್ಲಿ ನಾಟಿ ಮಾಡಿದ 15–20 ದಿನಗಳ ಅವಧಿಯಲ್ಲಿ ಬರುವ ಕಳೆಗಳಿಗೆ ಉದಯೋತ್ತರ ಕಳೆನಾಶಕವಾದ ಬಿಸ್ಪೈರಿಬ್ಯಾಕ್ ಸೋಡಿಯಂ 10% ಎಸ್.ಸಿ@ 0.4ಮಿ.ಲೀ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು. (ಸೂಚನೆ: ಕಳೆಗಳು 2–4 ಎಲೆಗಳು ಇದ್ದಲ್ಲಿ ಪರಿಣಾಮಕಾರಿ)<br>➢ ಭತ್ತದಲ್ಲಿ ನಾಟಿ ಮಾಡಿದ 15–20 ದಿನಗಳ ಅವಧಿಯಲ್ಲಿ ಅಗಲ ಎಲೆ ಕಳೆಗಳು ಕಂಡುಬಂದರೆ ಉದಯೋತ್ತರ ಕಳೆನಾಶಕವಾದ 2,4–ಡಿ 80ಡಬ್ಲ್ಯೂ.ಪಿ (ಸೋಡಿಯಂ ಸಾಲ್ಟ್) @ 4 ಗ್ರಾಂ. ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು. (ಸೂಚನೆ: ಕಳೆಗಳು 2–4 ಎಲೆಗಳು ಇದ್ದಲ್ಲಿ ಪರಿಣಾಮಕಾರಿ)<br>➢ (ಸೂಚನೆ: 1 ಎಕರೆಗೆ ನೀರಿನ ಪ್ರಮಾಣ 120–150 ಲೀಟರ್) |

## ಜಾನುವಾರು ಸಲಹೆ:

| ಹಸು (ಸಾಮಾನ್ಯ ಸಲಹೆ) | ➢ ಜಾನುವಾರಗಳಲ್ಲಿ ಕಾಲುಬಾಯಿರೋಗ ನಿಯಂತ್ರಿಸಲು ಲಸಿಕೆ ಕೊಡಿಸಲು ಸಮಯ ಸೂಕ್ತವಾಗಿದೆ.<br>➢ ದನದ ಕೊಟ್ಟಿಗೆಯನ್ನು ಶುಚಿಯಾಗಿ ಇಡುವುದರಿಂದ ಜಾನುವಾರಗಳಲ್ಲಿ ಕಾಲುಬಾಯಿ ರೋಗವನ್ನು ತಡೆಗಟ್ಟಬಹುದು.<br>➢ ಮಳೆಗಾಲವಾಗಿರುವುದರಿಂದ ಗುಡುಗು–ಸಿಡಿಲು ಬರುವ ಸಂಭವವಿರುವುದರಿಂದ ಜಾನುವರುಗಳನ್ನು ವಿದ್ಯುತ್ ಕಂಬದ ಕೆಳಗೆ, ತೆರೆದ ಪ್ರದೇಶಗಳಲ್ಲಿ ಹಾಗೂ ಮರದ ಕೆಳಗೆ ಕಟ್ಟಹಾಕದೆ ಕೊಟ್ಟಿಗೆಯಲ್ಲಿ ಕಟ್ಟುವುದು ಸೂಕ್ತ.<br>➢ ಗಂಟಲು ಬೇನೆ & ಚಪ್ಪೆ ರೋಗ: ಈ ರೋಗಗಳು ಮುಂಗಾರು ಸಮಯದಲ್ಲಿ ಉಲ್ಬಣವಾಗುವ ಸಂಭವವಿರುವುದರಿಂದ ಜೂನ್ ತಿಂಗಳಿನಲ್ಲಿ ಈ ರೋಗದ ವಿರುದ್ಧ ಲಸಿಕೆ ಹಾಕಿಸುವುದು ಸೂಕ್ತವಾಗಿದೆ.<br>➢ ಧೀರ್ಘಕಾಲಿಕ ಮೇವಿನ ಬೆಳೆಗಳನ್ನು ನಾಟಿ ಮಾಡಲು ಸೂಕ್ತ ಸಮಸಯವಾಗಿದೆ<br>➢ ಜಾಣುವಾರುಗಳಿಗೆ ಆಹಾರದ ಜೊತೆಗೆ ಪೂರಕವಾದ ಪೌಷ್ಠಿಕ ಆಹಾರವನ್ನು ನೀಡುವುದು ಸೂಕ್ತ |
|---|---|

## ಜಾನುವಾರು ಸಲಹೆ:

| ಹಸು (ಸಾಮಾನ್ಯ ಸಲಹೆ) | ➢ ದನ ಕರುಗಳಿಗೆ ಹಸಿರು ಮೇವನ್ನು ಒದಗಿಸಲು ಮೇವಿನ ಜೋಳ, ಅಲಸಂದೆ, ಗೋವಿನ ಜೋಳ ಮತ್ತು ನೇಪಿಯರ್ ಹುಲ್ಲನ್ನು ಹಾಕಲು ಸೂಕ್ತ ಸಮಯವಾಗಿದೆ.<br>➢ ಮಳೆಗಾಲವಾಗಿರುವುದರಿಂದ ಗುಡುಗು–ಸಿಡಿಲು ಬರುವ ಸಂಭವವಿರುವುದರಿಂದ ಜಾನುವರುಗಳನ್ನು ವಿದ್ಯುತ್ ಕಂಬದ ಕೆಳಗೆ, ತೆರೆದ ಪ್ರದೇಶಗಳಲ್ಲಿ ಹಾಗೂ ಮರದ ಕೆಳಗೆ ಕಟ್ಟಹಾಕದೆ ಕೊಟ್ಟಿಗೆಯಲ್ಲಿ ಕಟ್ಟುವುದು ಸೂಕ್ತ.<br>➢ ಗಂಟಲು ಬೇನೆ & ಚಪ್ಪೆ ರೋಗ: ಈ ರೋಗಗಳು ಮುಂಗಾರು ಸಮಯದಲ್ಲಿ ಉಲ್ಬಣವಾಗುವ ಸಂಭವವಿರುವುದರಿಂದ ಜೂನ್ ತಿಂಗಳಿನಲ್ಲಿ ಈ ರೋಗದ ವಿರುದ್ಧ ಲಸಿಕೆ ಹಾಕಿಸುವುದು ಸೂಕ್ತವಾಗಿದೆ.<br>➢ ಜಾನುವಾರುಗಳಿಗೆ ಜಂತುನಾಶಕವನ್ನು ನೀಡುವುದು |
|---|---|

## ಸಾಮಾನ್ಯ ಸಲಹೆ:

| ಮಳೆ ನೀರು ಕೊಯ್ಲು ಘಟಕ | ರೈತರು ತಮ್ಮ ಜಮೀನಿನಲ್ಲಿ ಈಗಾಗಲೇ ನಿರ್ಮಿಸಿರುವ ಮಳೆ ನೀರು ಕೊಯ್ಲು ಘಟಕಗಳಾದ ಕೃಷಿ ಹೊಂಡಗಳನ್ನು ಪುನಶ್ಚೇತನಗೊಳಿಸುವುದು. ಇದರಿಂದ ರೈತರು ಬೇಸಿಗೆಯಲ್ಲಿ ನೀರಿನ ಕೊರತೆ ಎದುರಿಸುವುದನ್ನು ತಗ್ಗಿಸಬಹುದು ಹಾಗೂ ತಮ್ಮ ಆದಾಯವನ್ನು ಹೆಚ್ಚಿಸಲು ಮೀನು ಸಾಕಾಣಿಕೆಯನ್ನು ಮಾಡಬಹುದಾಗಿದೆ. |
|---|---|
| ಮೀನು ಮರಿ ಉತ್ಪಾದನೆ | ➢ ಕರಾವಳಿ ಮೀನು ಕೃಷಿಕರು ಮಿನು ಕೊಳದ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸೂಕ್ತ ಸಮಯವಾಗಿದೆ.<br>➢ ಮೀನು ಮರಿ ಪಾಲನಾ ಕೊಳಗಳಲ್ಲಿ ಸುಣ್ಣವನ್ನು ಹಾಕುವ ಮೂಲಕ ರಸಸಾರವನ್ನು 7.5 ಇರುವಂತೆ ಸರಿದೂಗಿಸುವುದು. ಅನಂತರ ಹಟ್ಟಿ ಗೊಬ್ಬರವನ್ನು ಹಾಕಿ ನೈಸರ್ಗಿಕ ಮೀನಿನ ಆಹಾರ ಉತ್ಪಾದನೆಯಿಂದ ಕೊಳದ ನೀರು ತಿಳಿ ಹಸಿರಿನಿಂದ ಕಂದು ಬಣ್ಣಕ್ಕೆ ತಿರುಗುವ ವೇಳೆಗೆ ಸಿಹಿ ನೀರು ಮೀನು ಮರಿಗಳನ್ನು ದಾಸ್ತಾನು ಮಾಡಬಹುದು. ಈ ಮರಿಗಳು ಜೂನ್ ಮತ್ತು ಜುಲೈ ತಿಂಗಳಲ್ಲಿ ಅಧಿಕೃತ ಸರಬರಾಜು ಮಾಡುವವರಲ್ಲಿ ಮಾರಾಟಕ್ಕೆ ಲಭ್ಯವಿರುತ್ತದೆ. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)

ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.

ಡಾ. ಕೆ. ವಿ. ಸುಧೀರ್ ಕಾಮತ್,
ನೊಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.

## *ದಿನಾಂಕ 12.07.2025 ರಿಂದ 16.07.2025ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕುವಾರು ಹವಾಮಾನ ಮುನ್ಸೂಚನೆ*

| ಹವಾಮಾನದ ಅಂಶಗಳು | ಬಂಟ್ವಾಳ ತಾಲೂಕಿನ ಕ್ರೂಢೀಕರಿಸಿದ ಹವಾಮಾನ ಮುನ್ಸೂಚನೆ | | | | |
|---|---|---|---|---|---|
| | ದಿನ–1 (12.07.2025) | ದಿನ–2 (13.07.2025 ) | ದಿನ–3 (14.07.2025 ) | ದಿನ–4 (15.07.2025) | ದಿನ–5 (16.07.2025 ) |
| ಮಳೆ ಪ್ರಮಾಣ (ಮಿ.ಮೀ.) | 29.8 | 29.7 | 37.4 | 56.3 | 63.5 |
| ಗರಿಷ್ಠ ಉಷ್ಣಾಂಶ (°C) | 28.2 | 27.7 | 27.8 | 27 | 26.5 |
| ಕನಿಷ್ಠ ಉಷ್ಣಾಂಶ (°C) | 23.7 | 23.7 | 23.5 | 23.7 | 23.4 |
| ಮೋಡದ ಹೊದಿಕೆ (ಒಕ್ಟಾ) | 6 | 6 | 8 | 7 | 7 |
| ಗರಿಷ್ಠ ಆರ್ದ್ರತೆ (ಶೇ.) | 93.9 | 95.4 | 94.4 | 95 | 95 |
| ಕನಿಷ್ಠ ಆರ್ದ್ರತೆ (ಶೇ.) | 73.1 | 76 | 74.2 | 78.5 | 81.7 |
| ಗಾಳಿಯ ವೇಗ (Kmph) | 1.1 | 2.7 | 2.4 | 2.6 | 1.8 |
| ಗಾಳಿಯ ದಿಕ್ಕು (°) | 71.6 | 293.2 | 296.6 | 236.3 | 216.8 |
| ಮುನ್ಸೂಚನೆ | R+ | R+ | R+ | R+ | R+ |
| ಸಂಭವನೀಯತೆ (%) | 75-100% | 75-100% | 75-100% | 75-100% | 75-100% |

| ಹವಾಮಾನದ ಅಂಶಗಳು | ಬೆಳ್ತಂಗಡಿ ತಾಲೂಕಿನ ಕ್ರೂಢೀಕರಿಸಿದ ಹವಾಮಾನ ಮುನ್ಸೂಚನೆ | | | | |
|---|---|---|---|---|---|
| | ದಿನ–1 (12.07.2025) | ದಿನ–2 (13.07.2025 ) | ದಿನ–3 (14.07.2025 ) | ದಿನ–4 (15.07.2025) | ದಿನ–5 (16.07.2025 ) |
| ಮಳೆ ಪ್ರಮಾಣ (ಮಿ.ಮೀ.) | 31.9 | 32.3 | 35.7 | 48.8 | 47.2 |

| | | | | | |
|---|---|---|---|---|---|
| ಗರಿಷ್ಠ ಉಷ್ಣಾಂಶ (°C) | 27.6 | 27.5 | 27.4 | 27.2 | 27.1 |
| ಕನಿಷ್ಠ ಉಷ್ಣಾಂಶ (°C) | 25.5 | 25.7 | 25.7 | 25.6 | 25.5 |
| ಮೋಡದ ಹೊದಿಕೆ (ಒಕ್ಟಾ) | 6 | 6 | 8 | 7 | 7 |
| ಗರಿಷ್ಠ ಆರ್ದ್ರತೆ (ಶೇ.) | 88.4 | 89.6 | 88.6 | 90.3 | 89.7 |
| ಕನಿಷ್ಠ ಆರ್ದ್ರತೆ (ಶೇ.) | 75.4 | 78 | 75.7 | 78.1 | 79.3 |
| ಗಾಳಿಯ ವೇಗ (Kmph) | 5.8 | 13.3 | 11.1 | 13.4 | 11.2 |
| ಗಾಳಿಯ ದಿಕ್ಕು (°) | 291.8 | 288.9 | 283.1 | 263.8 | 264.5 |
| ಮುನ್ಸೂಚನೆ | R+ | R+ | R+ | R+ | R+ |
| ಸಂಭವನೀಯತೆ (%) | 75-100% | 75-100% | 75-100% | 75-100% | 75-100% |

| ಹವಾಮಾನದ ಅಂಶಗಳು | ಮಂಗಳೂರು ತಾಲೂಕಿನ ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | |
|---|---|---|---|---|---|
| | ದಿನ–1 (12.07.2025) | ದಿನ–2 (13.07.2025 ) | ದಿನ–3 (14.07.2025 ) | ದಿನ–4 (15.07.2025) | ದಿನ–5 (16.07.2025 ) |
| ಮಳೆ ಪ್ರಮಾಣ (ಮಿ.ಮೀ.) | 31.9 | 33.7 | 37 | 46.7 | 45.1 |
| ಗರಿಷ್ಠ ಉಷ್ಣಾಂಶ (°C) | 27.6 | 27.5 | 27.4 | 27.2 | 27.2 |
| ಕನಿಷ್ಠ ಉಷ್ಣಾಂಶ (°C) | 25.8 | 26 | 26 | 26 | 25.8 |
| ಮೋಡದ ಹೊದಿಕೆ (ಒಕ್ಟಾ) | 6 | 6 | 8 | 7 | 7 |
| ಗರಿಷ್ಠ ಆರ್ದ್ರತೆ (ಶೇ.) | 88.1 | 89.1 | 88.1 | 89.7 | 89 |
| ಕನಿಷ್ಠ ಆರ್ದ್ರತೆ (ಶೇ.) | 75.6 | 77.6 | 75.4 | 77.4 | 78.3 |
| ಗಾಳಿಯ ವೇಗ (Kmph) | 9 | 16.2 | 14.6 | 15 | 15 |
| ಗಾಳಿಯ ದಿಕ್ಕು (°) | 298.6 | 286.8 | 278.5 | 259 | 259 |
| ಮುನ್ಸೂಚನೆ | R+ | R+ | R+ | R+ | R+ |
| ಸಂಭವನೀಯತೆ (%) | 75-100% | 75-100% | 75-100% | 75-100% | 75-100% |

| ಹವಾಮಾನದ ಅಂಶಗಳು | ಪುತ್ತೂರು ತಾಲೂಕಿನ ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | |
|---|---|---|---|---|---|
| | ದಿನ–1 (12.07.2025) | ದಿನ–2 (13.07.2025 ) | ದಿನ–3 (14.07.2025 ) | ದಿನ–4 (15.07.2025) | ದಿನ–5 (16.07.2025 ) |
| ಮಳೆ ಪ್ರಮಾಣ (ಮಿ.ಮೀ.) | 26.2 | 25 | 40.2 | 56.1 | 54.9 |
| ಗರಿಷ್ಠ ಉಷ್ಣಾಂಶ (°C) | 28 | 27.7 | 27.4 | 26.7 | 26.1 |
| ಕನಿಷ್ಠ ಉಷ್ಣಾಂಶ (°C) | 23 | 23.2 | 23 | 23.1 | 22.9 |
| ಮೋಡದ ಹೊದಿಕೆ (ಒಕ್ಟಾ) | 6 | 7 | 8 | 7 | 7 |
| ಗರಿಷ್ಠ ಆರ್ದ್ರತೆ (ಶೇ.) | 95.7 | 97 | 96.6 | 95.8 | 95.9 |
| ಕನಿಷ್ಠ ಆರ್ದ್ರತೆ (ಶೇ.) | 74.9 | 76.3 | 74.6 | 79.6 | 82.2 |
| ಗಾಳಿಯ ವೇಗ (Kmph) | 1.8 | 2.4 | 1.1 | 1.8 | 2.6 |
| ಗಾಳಿಯ ದಿಕ್ಕು (°) | 143.2 | 243.4 | 90 | 168.7 | 164.1 |
| ಮುನ್ಸೂಚನೆ | R+ | R+ | R+ | R+ | R+ |
| ಸಂಭವನೀಯತೆ (%) | 75-100% | 75-100% | 75-100% | 75-100% | 75-100% |

| ಹವಾಮಾನದ ಅಂಶಗಳು | ಸುಳ್ಯ ತಾಲೂಕಿನ ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | |
|---|---|---|---|---|---|
| | ದಿನ–1 (12.07.2025) | ದಿನ–2 (13.07.2025 ) | ದಿನ–3 (14.07.2025 ) | ದಿನ–4 (15.07.2025) | ದಿನ–5 (16.07.2025 ) |
| ಮಳೆ ಪ್ರಮಾಣ (ಮಿ.ಮೀ.) | 18.3 | 18.8 | 42.6 | 39.8 | 45.9 |
| ಗರಿಷ್ಠ ಉಷ್ಣಾಂಶ (°C) | 27.2 | 26.9 | 26.6 | 25.4 | 25.1 |
| ಕನಿಷ್ಠ ಉಷ್ಣಾಂಶ (°C) | 22.6 | 22.6 | 22.4 | 22.5 | 22.2 |
| ಮೋಡದ ಹೊದಿಕೆ (ಒಕ್ಟಾ) | 6 | 7 | 7 | 7 | 7 |
| ಗರಿಷ್ಠ ಆರ್ದ್ರತೆ (ಶೇ.) | 95.8 | 96.2 | 95.8 | 96.5 | 96.7 |
| ಕನಿಷ್ಠ ಆರ್ದ್ರತೆ (ಶೇ.) | 75.4 | 76.3 | 75.8 | 81.9 | 82.8 |
| ಗಾಳಿಯ ವೇಗ (Kmph) | 0.7 | 1.6 | 1.1 | 1.6 | 3.6 |
| ಗಾಳಿಯ ದಿಕ್ಕು (°) | 90 | 243.4 | 360 | 206.5 | 174.3 |
| ಮುನ್ಸೂಚನೆ | R+ | R+ | R+ | R+ | R+ |
| ಸಂಭವನೀಯತೆ (%) | 75-100% | 75-100% | 75-100% | 75-100% | 75-100% |